
ಕಲಿಯುವ ಕಲೆ...

# ಸುಂದರಬನ

೨



– ಧ್ವನಿ ಫೋಟೋ

**ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:**
'ಸುಂದರಬನ'ದಲ್ಲಿ ಖುಷಿ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ಮೊದಲು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ವಿದ್ಯಾರ್ಥಿ/ ವಿದ್ಯಾರ್ಥಿನಿಯ ಹೆಸರು :.........................................

ಶಾಲೆಯ ಹೆಸರು :.................................................................


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ನವೆಂಬರ್ – ಡಿಸೆಂಬರ್ ೨೦೨೪–೨೫

ಆರಂಭ ಯೋಜನೆ
Arambha 2024-25 Project
is Supported by Many
Individual Donors

# ಕಥೆ ಕಟ್ಟೋಣ ಬನ್ನಿ




_______________________________________________

_______________________________________________

_______________________________________________

_______________________________________________

_______________________________________________


_______________________________________________

**ನಮ್ಮ ಆಶಯ :**
ಮಕ್ಕಳು ಮೇಲಿನ ಚಿತ್ರಗಳನ್ನು ಗಮನಿಸಲಿ. ತಮ್ಮದೇ ಆದ ರೀತಿಯಲ್ಲಿ ಕಥೆ ಕಟ್ಟಿ ಹೇಳಲು ಪ್ರಯತ್ನಿಸಲಿ. ನಂತರ ತಾವು ನೋಡಿರುವ ಪ್ರಾಣಿಗಳ ಕುರಿತು ಮಾತನಾಡಲಿ. ಅನಂತರ ಕೊಟ್ಟಿರುವ ಗೆರೆ ಮೇಲೆ ಕಥೆಯನ್ನು ಬರೆಯಲು ಪ್ರಯತ್ನಿಸಲಿ.

| ಭಾಷಾ ಚೌಕ | | |
|---|---|---|
| ಹಾವು | – | **Snake** (ಸ್ನೇಕ್) |
| ಮಂಗ | – | **Monkey** (ಮಂಕಿ) |
| ಹುಲ್ಲು | – | **Grass** (ಗ್ರಾಸ್) |

ಮುಕ್ತ ಕಲಿಕೆಗಾಗಿ

# ಜಾಲದಾಟ



ಆರೋಗ್ಯ ಮತ್ತು ಪರಿಸರ: 'ಆಹಾರ ಪ್ರಪಂಚ' ಪಾಠಕ್ಕೆ ಪೂರಕ


**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಜಾಲದಾಟವನ್ನು ಗಮನಿಸಲಿ. ಆಯಾ ಸಂಖ್ಯೆಗೆ ಅನುಗುಣವಾಗಿ ತರಕಾರಿ, ಹಣ್ಣುಗಳನ್ನು ಗುರುತಿಸಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಖಾಲಿ ಇರುವ ಜಾಗದಲ್ಲಿ ತಮಗೆ ಇಷ್ಟವಾಗುವ ತರಕಾರಿ ಮತ್ತು ಹಣ್ಣುಗಳ ಚಿತ್ರ ಬರೆದು, ಬಣ್ಣ ಹಚ್ಚಲಿ. ಅದರ ಕುರಿತು ಮಾತನಾಡಲಿ.

**ಭಾಷಾ ಚೌಕ**

**ಹಣ್ಣು – Fruit** (ಫ್ರೂಟ್)
**ಕೀಟ – Insect** (ಇನ್‌ಸೆಕ್ಟ್)

# ಹುಡುಕುವಾಟ





**ನಮ್ಮ ಆಶಯ:**
ಕೆಳಗಿನ ಆಯತದಲ್ಲಿರುವ ವಸ್ತುಗಳು ಮೇಲಿನ ಚಿತ್ರದಲ್ಲಿ ಅಡಗಿವೆ. ಅವುಗಳನ್ನು ಮಕ್ಕಳು ಹಸಿರು ಬಣ್ಣ ಹಚ್ಚಿ ಗುರುತಿಸಲಿ. ನಂತರ ಚಿತ್ರಕ್ಕೆ ಸೂಕ್ತವಾದ ಬಣ್ಣ ಹಚ್ಚಿ, ಅದರ ಕುರಿತು ಮಾತನಾಡಲಿ.

**ಭಾಷಾ ಚೌಕ**

**ವಸ್ತು – Thing** (ಥಿಂಗ್)

## ಅಜ್ಜನ ಹಲ್ಲುಸೆಟ್ಟು



ಬೆಳಿಗ್ಗೆ ಎದ್ದವ ಪುಟ್ಟು
ಬಚ್ಚಲಲಿ ನೋಡಿದ ಹಲ್ಲುಸೆಟ್ಟು
ಅಜ್ಜನ ಹಲ್ಲು ಬಿದ್ದಿವೆ ಎಂದು
ಸಂಭ್ರಮಿಸಿದ ತಿಪ್ಪೇಲಿ ಎಸೆದು ಬಂದು


ತಡಕಾಡಿದ ಅಜ್ಜ ಮನೆಯನ್ನೆಲ್ಲ
ಬಹು ಹೊತ್ತಾದರೂ ಸಿಗಲೇ ಇಲ್ಲ
ಊಟವಂತೂ ರುಚಿಸಲೇ ಇಲ್ಲ
ಮನಕೆ ಸಮಾಧಾನವಾಗಲೇ ಇಲ್ಲ

ಹಾಗೆ ಕೇಳಿದ ಪುಟ್ಟುವಿಗೆ
ನೋಡಿದೆ ಏನೋ ಹಲ್ಲಸೆಟ್ಟು
ಅಯ್ಯೋ! ಈಗ ಕೇಳ್ತಿಯಲ್ಲಜ್ಜ
ಆಗಲೇ ಬಂದೆ ಒಗೆದುಬಿಟ್ಟು

ಅಲ್ಲೋ ಮುಂಡೇದೆ ತಿಳಿಲಿಲ್ವೇನೋ?
ಕಣ್ಣಿಗೆ ಏನೆಂದು ಕಾಣಲಿಲ್ವೇನೋ?
ಕೇಳದೆ ಹಿಂಗ್ಯಾಕೆ ಮಾಡಿದೆ? ಎಂದು
ನುಡಿದನು ಅಜ್ಜನು ಬಲು ನೊಂದು

ಅಲ್ಲ ಅಜ್ಜ ನೀನೆ ಹೇಳಿರಲಿಲ್ವೇನು?
ಬಿದ್ದಾಗ ಹಲ್ಲು ಎಸೆಬೇಕೆಂದು
ಹಾಗಾದರೆ ಬೇಗ ಬರುವುದೆಂದು!
ಪುಟ್ಟು ನುಡಿದ, ಹಾಗೆ ಮಾಡಿದೆನೆಂದು

**ಕೃಪೆ: ಗುಂಡುರಾವ್ ದೇಸಾಯಿ**
**ಆಕರ: ಅಜ್ಜನ ಹಲ್ಲುಸೆಟ್ಟು ಮಕ್ಕಳಿಗಾಗಿ ಕವಿತೆಗಳು**



## ಕುಂಬಳಕಾಯಿ ಚೇಷ್ಟೆ

ಹಾವಿನಂತೆ ಪಡುವಲ
ಕಹಿಯ ಮುದ್ದೆ ಹಾಗಲ
ಎನುತ ತೆಗಳಿ ಕಿಲಕಿಲ
ನಗುತಲಿತ್ತು ಕುಂಬಳ


**ಕೃಪೆ: ಶ್ರೀ ಯು.ಕೆ.ಪೈ**
**(ಪ್ರಜಾವಾಣಿ, ೧೦.೬.೨೦೦೧)**

**ಭಾಷಾ ಚೌಕ**

ಹಲ್ಲು – Teethe (ಟೀದ್)
ಕುಂಬಳಕಾಯಿ – Pumpkin (ಪಂಪ್‌ಕಿನ್)

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಪ್ರಾಸ ಪದ್ಯಗಳನ್ನು ಹಾಡಿ ಕುಣಿದು ಆನಂದಿಸಲಿ. ನಂತರ ಚಿತ್ರಗಳಿಗೆ ಬಣ್ಣ ಹಚ್ಚಲಿ.

# ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು




ಸಾಂದರ್ಭಿಕ ಕಲಿಕಾಗಿ

**ನಮ್ಮ ಆಶಯ:**

ಮಕ್ಕಳು ಕೊಟ್ಟಿರುವ ಚಿತ್ರಕ್ಕೆ ಬಣ್ಣ ಹಚ್ಚಲಿ. ನಂತರ ಕರ್ನಾಟಕ ರಾಜ್ಯೋತ್ಸವವನ್ನು ಶಾಲೆಯಲ್ಲಿ ಆಚರಿಸಿದರ ಕುರಿತು ಮಾತನಾಡಲಿ. ಖಾಲಿ ಇರುವ ಜಾಗದಲ್ಲಿ ಕರ್ನಾಟಕ ಬಾವುಟದ ಚಿತ್ರ ಬರೆದು, ಬಣ್ಣ ಹಚ್ಚಲಿ.

# ಹುಡುಕುವಾಟ





**ನಮ್ಮ ಆಶಯ:**

ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಲಿ. ಚಿತ್ರದಲ್ಲಿ ಇರುವ ಇಂಗ್ಲೀಷ್ ಅಕ್ಷರಗಳನ್ನು ಗುರುತಿಸಿ, ಅವುಗಳಿಗೆ ತಿಳಿಹಸಿರು ಬಣ್ಣ ಹಚ್ಚಲಿ. ನಂತರ ಅದೇ ಚಿತ್ರದಲ್ಲಿ ಒಂದು ಬಾತುಕೋಳಿಮರಿ ಅಡಗಿಕೊಂಡಿದೆ. ಅದನ್ನು ಹುಡುಕಿ ಹಳದಿ ಬಣ್ಣ ಹಚ್ಚಲಿ.

# ಸಂಖ್ಯಾಬಣ್ಣದಾಟ

**ಸೂಚನಾ ಪಟ್ಟಿ**

9. ಹಳದಿ ಬಣ್ಣ
8. ಕೆಂಪು ಬಣ್ಣ
7. ನೇರಳೆ ಬಣ್ಣ
6. ಹಸಿರು ಬಣ್ಣ
5. ಕೇಸರಿ ಬಣ್ಣ





**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಲಿ. ಅಲ್ಲಿರುವ ಲೆಕ್ಕಗಳನ್ನು ಮಾಡಿ, ಬಂದ ಉತ್ತರಕ್ಕೆ ಸೂಚನಾ ಪಟ್ಟಿಯನ್ನು ಅನುಸರಿಸಿ, ಬಣ್ಣ ಹಚ್ಚಲಿ. ನಂತರ ಖಾಲಿ ಇರುವ ಜಾಗದಲ್ಲಿ ತಮಗಿಷ್ಟವಾದ ಹೂವಿನ ಹೆಸರುಗಳನ್ನು ಕೊಟ್ಟಿರುವ ಗೆರೆಯ ಬರೆಯಲಿ.

**ಭಾಷಾ ಚೌಕ**


**ಹೂವು – Flower** (ಫ್ಲಾವರ್)
**ದಳ/ಎಸಳು – Petal** (ಪೆಟಲ್)
**ಎಲೆ – Leaf** (ಲೀಫ್)
**ಸಂಖ್ಯೆ/ಅಂಕಿ – Number** (ನಂಬರ್)
**ಬಣ್ಣ – Colour** (ಕಲರ್)

ಮುಕ್ತ ಕಲಿಕೆಗಾಗಿ


ಕಪೆ ________




ಕಣು ________




ಕತೆ ________



ಬೆಕು ________



ಹಗ ________



್ಗ  ್ತ  ್ಕ  ್ಪ  ್ಣ


**ಭಾಷಾ ಚೌಕ**

ಕಪ್ಪೆ – **Frog** (ಫ್ರಾಗ್)
ಕಣ್ಣು – **Eye** (ಐ)
ಕತ್ತೆ – **Donkey** (ಡಾಂಕಿ)
ಬೆಕ್ಕು – **Cat** (ಕ್ಯಾಟ್)
ಹಗ್ಗ – **Rope** (ರೋಪ್)

**ನಮ್ಮ ಆಶಯ:**
ಮಕ್ಕಳು ಮೇಲೆ ಕೊಟ್ಟಿರುವ ಪದಗಳನ್ನು ಗಟ್ಟಿಸಿ/ಜೋರಾಗಿ ಓದಲಿ. ಆಮೇಲೆ ಬೂದು ಬಣ್ಣದ ಪಟ್ಟಿಯಲ್ಲಿ ಕೊಟ್ಟಿರುವ ಒತ್ತಕ್ಷರವನ್ನು ಆಯ್ದು ಪದಗಳಿಗೆ ಸೇರಿಸಿ ಓದಲಿ. ನಂತರ ಗೆರೆಗಳ ಮೇಲೆ ಬರೆದು ಮತ್ತೊಮ್ಮೆ ಜೋರಾಗಿ ಓದುವ ಮೂಲಕ ಆಗುವ ವ್ಯತ್ಯಾಸ ಕಂಡು ಹಿಡಿಯಲಿ.

ಭಾಷಾ ಕಲಿಕೆಗಾಗಿ

# ಕಲಾ ಕ್ಷೇತ್ರ...



ಆರೋಗ್ಯ ಮತ್ತು ಪರಿಸರ: 'ಆಟಗಳು' ಮಾರ್ಚ್ ಪೂರಕ

**ನಮ್ಮ ಆಶಯ:**

ಚುಕ್ಕಿಯಿಂದ ಕೂಡಿರುವ ಚಿತ್ರವನ್ನು ಮಕ್ಕಳು ತಿದ್ದಿ, ಬಣ್ಣ ಹಚ್ಚಲಿ. ನಂತರ ತಾವು ನೋಡಿರುವ ವಾಹನಗಳ ಕುರಿತು ಮಾತನಾಡಲಿ. ಅನಂತರ ಕೊಟ್ಟಿರುವ ಖಾಲಿ ಜಾಗದಲ್ಲಿ ತಮಗಿಷ್ಟವಾದ ವಾಹನಗಳ ಚಿತ್ರ ಬರೆದು ಬಣ್ಣ ಹಚ್ಚಲಿ.

**ಭಾಷಾ ಚೌಕ**

**ಟ್ರಕ್ – Truck** (ட்ரக்)
**ಗಾಲಿ/ಚಕ್ರ – Wheel** (வீல்)

# ಕಣ್ಣುರುಕು






ಮಧು ಕಲಕಟಗಿ

**ನಮ್ಮ ಆಶಯ:**
ಮೇಲಿನ ಎರಡೂ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಇದ್ದರೂ ಅವುಗಳಲ್ಲಿ ಎಂಟಕ್ಕಿಂತಲೂ ಹೆಚ್ಚು ವ್ಯತ್ಯಾಸಗಳಿವೆ. ಮಕ್ಕಳು ಅವುಗಳನ್ನು ಗುರುತಿಸಿ, ಬಣ್ಣ ಹಚ್ಚಲಿ. ನಂತರ ಬೇರೊಂದು ಹಾಳೆಯಲ್ಲಿ ತಮಗಿಷ್ಟವಾದ ಪ್ರಾಣಿ – ಪಕ್ಷಿಗಳ ಚಿತ್ರಗಳನ್ನು ಬಿಡಿಸಿ, ಚಿತ್ರಗಳಿಗೆ ಸೂಕ್ತವಾದ ಬಣ್ಣ ಹಚ್ಚಲಿ.

| ಭಾಷಾ ಚೌಕ |
|---|
| **ಪ್ರಾಣಿ – Animal** (ಆ್ಯನಿಮಲ್) |
| **ಕಾಡು/ವನ – Forest** (ಫಾರೆಸ್ಟ್) |
| **ಗುಂಪು – Group** (ಗ್ರೂಪ್) |

# ಚುಕ್ಕಿಯಾಟ




ಮುಕ್ತ ಕಲಿಕೆಗಾಗಿ

## ಅಂಬಾರಿ

ಆನೆ ಮೇಲೆ ಅಂಬಾರಿ
ನನ್ನ ತಂಗಿ ಬಂಗಾರಿ
ಶ್ರಾವಣದಲ್ಲಿ ಸಿಂಗಾರಿ!
ತಿಂತಾಳೆ ಒಣ ಚುರುಮುರಿ!!


–ಶಿಹೊಂ, ಧ್ವನಿ ಬಳಗ
ಆಕರ: ದೋಸೆ–ಪಾಸೆ

**ಭಾಷಾ ಚೌಕ**

**ಆನೆ – Elephant** (ಎಲಿಫೆಂಟ್)
**ಸೊಂಡಿಲು – Trunk** (ಟ್ರಂಕ್)
**ದಂತ – Tusk** (ಟಸ್ಕ್)

**ನಮ್ಮ ಆಶಯ:**
ಮಕ್ಕಳು ಚುಕ್ಕಿಚಿತ್ರದಲ್ಲಿ 1ರಿಂದ 40ರವರೆಗಿನ ಸಂಖ್ಯೆಗಳನ್ನು ಕ್ರಮವಾಗಿ ಸೇರಿಸಲಿ. ಚಿತ್ರಕ್ಕೆ ಬಣ್ಣ ಹಚ್ಚಲಿ. ಮೂಡುವ ಚಿತ್ರದ ಕುರಿತು ಮಾತನಾಡಲಿ. ನಂತರ ಕೊಟ್ಟಿರುವ ಪದ್ಯವನ್ನು ಹಾಡಲಿ.

# ಮಂಡಲಕಲೆ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:**

ಮಕ್ಕಳು ಮೊದಲು ಚಿತ್ರವನ್ನು ಗಮನವಿಟ್ಟು ನೋಡಲಿ. ನಂತರ ತಮಗಿಷ್ಟವಾದ ಬಣ್ಣಗಳನ್ನು ತೆಗೆದುಕೊಂಡು ಪ್ರತಿಯೊಂದು ಭಾಗಕ್ಕೂ ಪ್ರತ್ಯೇಕವಾಗಿ ಹಚ್ಚುತ್ತಾ ಹೋಗಲಿ. ಈ ಚಟುವಟಿಕೆಯನ್ನು ಒಂದೇ ಸಲಕ್ಕೆ ಮುಗಿಸಬೇಕೆನ್ನುವ ಒತ್ತಾಯವಿಲ್ಲ. ತಮ್ಮ ಬಿಡುವಿನ ವೇಳೆಯಲ್ಲಿಯೂ ಸ್ವಲ್ಪ ಸ್ವಲ್ಪ ಮಾಡಬಹುದು. ಆದರೆ ಇದನ್ನು ಮಾಡುವಾಗ ಆದಷ್ಟು ಇದನ್ನೇ ಗಮನಿಸಲಿ.

# ನೆರಳಿನಾಟ



ಮಜಾ ಕಲಿಕೆಗಾಗಿ

| ಭಾಷಾ ಚೌಕ |
| --- |
| ಅಳಿಲು – **Squirrel** (ಸ್ಕ್ವಿರಲ್) |
| ನರಿ – **Fox** (ಫಾಕ್ಸ್) |
| ಇಲಿ – **Mouse** (ಮೌಸ್) |
| ಆಮೆ – **Turtle** (ಟರ್ಟಲ್) |

**ನಮ್ಮ ಆಶಯ:**
ಮಕ್ಕಳು ಕೊಟ್ಟಿರುವ ಚಿತ್ರವನ್ನು ಗಮನಿಸಲಿ. ಕೆಲವು ಪ್ರಾಣಿಗಳು ಇವೆ. ಅವುಗಳ ನೆರಳುಗಳು ಬಿದ್ದಿವೆ. ಆಯಾ ಪ್ರಾಣಿಗಳ ವೃತ್ತದಲ್ಲಿ ಅವುಗಳ ನೆರಳುಗಳನ್ನು ಎಣಿಸಿ, ಬರೆಯಲಿ.

# ಬಣ್ಣದಾಟ





**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಿ, ಬಣ್ಣ ಹಚ್ಚಲಿ. ನಂತರ ಶಿಕ್ಷಕರ/ಪಾಲಕರ ಸಹಾಯದಿಂದ ದೀಪಾವಳಿ ಹಬ್ಬದ ಕುರಿತು ತಿಳಿದುಕೊಳ್ಳಲಿ.


ಸಾಂದರ್ಭಿಕ ಕಲಿಕೆಗಾಗಿ

# ಒತ್ತಕ್ಷರದಾಟ

**ಮಾದರಿ ವೃತ್ತ:**




ಇದ್ದನೊಬ್ಬ ಪೆದ್ದ
ಸೈಕಲ್ ಹೊಡೆಯಲೆದ್ದ
ತಿರುಗಿ ತಿರುಗಿ ಬಿದ್ದ!





ಎಲೆ ಅಡಿಕೆ ಸುಣ್ಣ
ಬಾಯಿ ತುಂಬ ಬಣ್ಣ

**ಆಕರ: ಕನ್ನಡ ಕಲಿಕಾ ಮಾದರಿಗಳು**
**– ಶಿಹೊಂ**

ಭಾಷಾ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ವೃತ್ತಗಳಲ್ಲಿ ಇರುವ ಒತ್ತಕ್ಷರಗಳನ್ನು ಗುರುತಿಸಲಿ. ಉಳಿದ ಒತ್ತಕ್ಷರದ ವೃತ್ತವನ್ನು ಪೂರ್ಣಗೊಳಿಸಲಿ.
ಉದಾಹರಣೆಗೆ: ಮಾದರಿ ವೃತ್ತವನ್ನು ಗಮನಿಸಲಿ. ಕೊಟ್ಟಿರುವ ಆಯಾ ಒತ್ತಕ್ಷರಕ್ಕೆ ಸಂಬಂಧಿಸಿದ ಪ್ರಾಸಪದ್ಯಗಳನ್ನು ಹಾಡಲಿ.

# ಪದಜಾಲದಾಟ




---

---

---

---

---

---

---

---


---

---

**ನಮ್ಮ ಆಶಯ:**
ಸಮರ್ಥ್ ಮತ್ತು ಸ್ವಾತಿ ಶಾಲೆಗೆ ಹೋಗಬೇಕಾಗಿದೆ. ಹೋಗುವ ದಾರಿಯಲ್ಲಿ ಅವರು ಯಾವ ಯಾವ ಪದಗಳನ್ನು ನೋಡಿದರು ಎಂಬುದನ್ನು ಗಮನಿಸಿ, ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ.


**ಭಾಷಾ ಚೌಕ**
ಪದ – **Word** (ವರ್ಡ್)

ಮಾದರಿ ವ್ಯಾನ್



# ಕರಕುಶಲ – ವ್ಯಾನ್

1. ಮೊದಲು ವ್ಯಾನ್‌ಗೆ ಕ್ರೆಯಾನ್/ಬಣ್ಣದ ಪೆನ್ಸಿಲ್‌ನಿಂದ ನಿನಗಿಷ್ಟವಾದ ಬಣ್ಣ ಹಚ್ಚು.
2. ವ್ಯಾನ್ ಇರುವ ಹಾಳೆಯನ್ನು ಕತ್ತರಿಯ ಸಹಾಯದಿಂದ ಬೇರ್ಪಡಿಸು.
3. ಈಗ ವ್ಯಾನ್ ಸುತ್ತಲೂ ಇರುವ ದಪ್ಪ ಗೆರೆಯ ಮೇಲೆ ಕತ್ತರಿಸಿಕೊ.
4. ವ್ಯಾನ್ ಚಿತ್ರದಲ್ಲಿ ಚುಕ್ಕಿಗಳಿರುವ ಜಾಗದಲ್ಲಿ ಸರಿಯಾಗಿ, ನಿಧಾನವಾಗಿ ಮಡಚು.
5. ಚಿತ್ರದ ಅಂಚಿನಲ್ಲಿ '*' ಬರೆದಿರುವ ಜಾಗದಲ್ಲಿ ಅಂಟಿನಿಂದ ಸರಿಯಾಗಿ ಅಂಟಿಸು.
6. ಈಗ ನಿನ್ನ ಕೈಯಲ್ಲಿ ಒಂದು ಆಟಿಕೆ ವ್ಯಾನ್ ಸಿದ್ಧ. ಈ ನಿನ್ನ ವ್ಯಾನ್‌ಗೆ ಒಂದು ಹೆಸರು ಕೊಡು.




# ಎಣಿಕೆಯಾಟ



ಸಾಂದರ್ಭಿಕ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರದಲ್ಲಿ ಎಷ್ಟು ಬೆಕ್ಕುಗಳಿವೆ ಎಂಬುದನ್ನು ಎಣಿಕೆಮಾಡಿ ಕೊಟ್ಟಿರುವ ಗೆರೆಯ ಮೇಲೆ ಬರೆಯಲಿ. ನಂತರ ಚಿತ್ರಕ್ಕೆ ಬಣ್ಣ ಹಚ್ಚಲಿ. ಕ್ರಿಸ್‌ಮಸ್ ಹಬ್ಬದ ಕುರಿತು ಶಿಕ್ಷಕರೊಂದಿಗೆ ಮಾತನಾಡಲಿ.

# ನಮ್ಮ ಚಿತ್ರ – ನಿಮ್ಮ ಕಥೆ
## (ಆಧಾರಿತ ಚಟುವಟಿಕೆ)





1. ನೀನು ಆಕ್ಟೋಪಸ್ ಅನ್ನು ನೋಡಿದ್ದೀಯಾ?
2. ಅದರ ವಾಸಸ್ಥಳ ಯಾವುದು? ಅದಕ್ಕೆ ಎಷ್ಟು ಕಾಲುಗಳಿರುತ್ತವೆ?
3. ಆಕ್ಟೋಪಸ್‌ನ ಆಹಾರವೇನು?
4. ಆಕ್ಟೋಪಸ್‌ನ ಚಿತ್ರ ಬರೆದು, ಬಣ್ಣ ಹಚ್ಚು.

# ಚಿತ್ರಕಥಾಪಟ
## (ಆಧಾರಿತ ಚಟುವಟಿಕೆ)




1. ನೀನು ಪಕ್ಷಿಗಳನ್ನು ನೋಡಿದ್ದೀಯಾ?
2. ಯಾವ ಯಾವ ಪಕ್ಷಿಗಳನ್ನು ನೋಡಿದ್ದೀಯಾ?
3. ನಿನಗೆ ಅವುಗಳಲ್ಲಿ ಯಾವ ಪಕ್ಷಿಗಳು ಇಷ್ಟ ಮತ್ತು ಏಕೆ?
4. ಗೂಬೆಯನ್ನು ನೋಡಿದ್ದೀಯಾ? ಅದು ಹೇಗೆ ಕೂಗುತ್ತದೆ?
5. ನೀನು ಕಾಡಿಗೆ ಹೋದಾಗ ಯಾವುದಾದರೂ ಪಕ್ಷಿ ಅಥವಾ ಪ್ರಾಣಿಯನ್ನು ಮುಟ್ಟಿದ್ದೀಯಾ? ಅದರ ಅನುಭವದ ಕುರಿತು ಮಾತನಾಡು.
6. 'ಗೂಬೆಯ ಗೆಳೆಯರು' ಕಥೆ ಮುಗಿದ ಮೇಲೆ ಅದಕ್ಕೆ ಸಂಬಧಿಸಿದ ಕೆಲವು ಪ್ರಶ್ನೆಗಳಿವೆ. ಅವುಗಳನ್ನು ಆಲೋಚಿಸಿ, ಮಾತನಾಡು.

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಗೂಬೆಯ ಗೆಳೆಯರು' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.




# ಉಭಯಭಾಷಾ ಚಿತ್ರಕಥಾಪಟ


## (ಆಧಾರಿತ ಚಟುವಟಿಕೆ)

1. ಕಥೆಯಲ್ಲಿ ಯಾವ ಯಾವ ಪ್ರಾಣಿಗಳಿದ್ದವು?
2. ಅವುಗಳು ಹೇಗೆ ಕೂಗುತ್ತವೆ?
3. ಅವುಗಳನ್ನು ನೀನು ನೋಡಿದ್ದೀಯಾ?
4. ಕಥೆಯಲ್ಲಿ ಬರುವ ಪ್ರಾಣಿಗಳಿಗೆ ಯಾವ ಯಾವ ಆಹಾರ ಇಷ್ಟ?
5. ನಿನಗಿಷ್ಟವಾದ ಒಂದು ಪ್ರಾಣಿಯ ಚಿತ್ರ ಬರೆದು, ಬಣ್ಣ ಹಚ್ಚು.

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಪುಟಾಣಿ ಪ್ರಾಣಿಗಳು' ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕಥೆಯನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಕವನ ಚಿತ್ರಪಟ

## (ಆಧಾರಿತ ಚಟುವಟಿಕೆ)




1. ನೀನು ನಿಮ್ಮ ಅಜ್ಜ/ಅಜ್ಜಿ ಊರಿಗೆ ಹೋಗಿರುವೆಯಾ?
2. ಹೋಗಿದ್ದರೆ ಆ ಊರಿನಲ್ಲಿ ನಿನಗೆ ಏನು ಇಷ್ಟ?
3. ಅಜ್ಜ-ಅಜ್ಜಿ ಊರಿಗೆ ಹೋಗುವುದೆಂದರೆ ಇಷ್ಟಾನಾ? ಮತ್ತು ಯಾಕೆ?
4. ಅಜ್ಜಿ ಮಾಡುವ ಯಾವ ತಿಂಡಿ ನಿನಗೆ ಇಷ್ಟ?

**ನಮ್ಮ ಆಶಯ:**
ಈ ಚಟುವಟಿಕೆ ನಡೆಸುವ ಮುಂಚೆ ಅಥವಾ ನಡೆಯುವಾಗ ಸಂಬಂಧಿತ 'ಅಜ್ಜನ ಊರಲ್ಲಿ...' ಕವನ ಚಿತ್ರಪಟವನ್ನು ಮಕ್ಕಳು ಮತ್ತೊಂದು ಸಲ ನೋಡಲಿ. ಕವನವನ್ನು ಮನನ ಮಾಡಿಕೊಳ್ಳಲಿ. ಅನಂತರ, ಶಿಕ್ಷಕರು ಮತ್ತು ಮಕ್ಕಳ ನಡುವೆ ಮಾತುಕತೆ ನಡೆಯಲಿ. ಮಾತುಕತೆಗೆ ಪ್ರೇರಣೆಯಾಗಿ ಮಾತ್ರ ಇಲ್ಲಿ ಪ್ರಶ್ನೆಗಳು ಇವೆ.

# ಬಣ್ಣದಾಟ

## ತಲ್ಲಣಿಸದಿರು ಕಂಡ್ಯ ತಾಳು ಮನವೆ

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನು ಇದಕೆ ಸಂಶಯವಿಲ್ಲ

ನವಿಲಿಗೆ ಚಿತ್ರ ಬರೆದವರು ಯಾರು
ಪವಳದ ಲತೆಗೆ ಕೆಂಪಿಟ್ಟವರು ಯಾರು
ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು
ಅವನೆ ಸಲಹುವನು ಇದಕೆ ಸಂಶಯವಿಲ್ಲ

ಕಲ್ಲಿನಲ್ಲಿ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರ ತಂದೀವರಾರು
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

**– ಸಾವಿರಾರು ಕೀರ್ತನೆಗಳು**
**ಸಂಪಾದಕರು: ಪ್ರೊ.ಎ.ವಿ. ನಾಡವ**
**ಪ್ರಕಾಶನ: ಅಂಕಿತ ಪುಸ್ತಕ, ಬೆಂಗಳೂರು**




ಸಾಂದರ್ಭಿಕ ಚಿತ್ರ


ಕನಕದಾಸರ 'ತಲ್ಲಣಿಸದಿರು ಕಂಡ್ಯ ತಾಳು ಮನವೆ' ಕೀರ್ತನೆಯನ್ನು ಕೇಳಲು ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ.

**ನಮ್ಮ ಆಶಯ:**

ಮಕ್ಕಳು ಮೇಲಿನ ಚಿತ್ರವನ್ನು ಗಮನಿಸಿ, ಬಣ್ಣ ಹಚ್ಚಲಿ. ಕನಕದಾಸರ ಕುರಿತು ಶಿಕ್ಷರರಿಂದ ತಿಳಿದುಕೊಳ್ಳಲಿ. ನಂತರ ಕೊಟ್ಟಿರುವ QR ಕೋಡ್ ಲಿಂಕ್ ಅನ್ನು ಬಳಸಿ, ಅಲ್ಲಿರುವ ಹಾಡನ್ನು ಕೇಳಿಸಿಕೊಳ್ಳಲಿ. ನಂತರ ಆ ಹಾಡಿನ ಪಠ್ಯವನ್ನು ಕೊಡಲಾಗಿದೆ. ಅದನ್ನು ರಾಗವಾಗಿ ಹಾಡಲು ಪ್ರಯತ್ನಿಸಲಿ.

# ಗುರುತಿಸುವಾಟ





ಆರೋಗ್ಯ ಮತ್ತು ಪರಿಸರ: 'ಆಟಗಳು' ಮಾಡ್ಯೂ ಪ್ರೌಢ



**ನಮ್ಮ ಆಶಯ:**

ಮಕ್ಕಳು ಮೇಲಿನ ಚಿತ್ರಗಳನ್ನು ಗಮನಿಸಲಿ. ಯಾವ ಆಟ ಎಂದು ಹೆಸರಿಸಲಿ. ನಂತರ ಆ ಆಟದ ಕುರಿತು ಅವರ ಮಾತುಗಳನ್ನು, ಗೆರೆಯ ಮೇಲೆ ಬರೆಯಲು ಪ್ರಯತ್ನಿಸಲಿ. ಈ ತರಹದ ಆಟಗಳನ್ನು ಆಡಲು ಪ್ರೋತ್ಸಾಹಿಸಿ.

# ನೋಡು - ಮಾಡು



ಮುಚಿ ಕಲಿಕೆಗಾಗಿ

**ನಮ್ಮ ಆಶಯ:**
ಮಕ್ಕಳು ಚಿತ್ರವನ್ನು ಗಮನಿಸಲಿ. ನಂತರ ತರಕಾರಿಗಳನ್ನು ಬಳಸಿಕೊಂಡು ವಿವಿಧ ವಾಹನಗಳನ್ನು ರಚಿಸಲು ಪ್ರಯತ್ನಿಸಲಿ.

ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

**ನಮ್ಮ ಆಶಯ:**
೨ನೇ ತರಗತಿಯ ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿಸಲಾದ 'ಸುಂದರಬನ'ದಲ್ಲಿನ ಚಟುವಟಿಕೆ – ಆಟ ಇತ್ಯಾದಿಗಳೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ಕನ್ನಡ – ಪರಿಸರ ಅಧ್ಯಯನ – ಗಣಿತ ವಿಷಯಗಳಿಗೆ ಪೂರಕವಾಗಿ ರೂಪುಗೊಂಡಿವೆ ಎಂಬುದನ್ನು ತಾವು ಗಮನಿಸಬೇಕು.


**ಸಂಪರ್ಕ ಮಾಹಿತಿ:**
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, 'ಪುಷ್ಪಾಂಜಲಿ'
೩ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ – ೫೮೦ ೦೦೭
ಮೊ: ೯೮ ೬೬೬ ೧೦೫೫
dhwanitrust@gmail.com
www.dhwanitrust.org



ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.